ಲಂಬಾಣಿ ತಾಂಡಗಳನ್ನು ಹಳ್ಳಿಗಳಾಗಿ ಪರಿವರ್ತಿಸುವುದು

೧೦೨೭. ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).–ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ಹಳ್ಳಿಗಳನ್ನಾಗಿ ಪರಿವರ್ತಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಶ್ನೆಯನ್ನು ಪರಿಶೀಲಿಸುವುದಾಗಿ ಸರ್ಕಾರವು ಆಶ್ವಾಸನೆ ನೀಡಿರುತ್ತದೆ.

ಆ) ಈ ವಿಷಯವು ಸರ್ಕಾರದ ತೀವ್ರ ಪರಿಗಣನೆಯಲ್ಲಿರುತ್ತದೆ.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ನಡೆದ ಮುಷ್ಕರ

೪೬೭. ಶ್ರೀ ಎ. ಕೃಷ್ಣಪ್ಪ (ವರ್ತೂರು).–ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮುಷ್ಕರ ಹಾಗೂ ಬೀಗ ಮುದ್ರೆಯಿಂದಾಗಿ ಕೆಲಸ ನಿಲ್ಲಿಸಿದ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳೆಷ್ಟು ?

ಇ) ಈ ಮುಷ್ಕರದಿಂದಾಗಿ ನಷ್ಟವುಂಟಾದ ಮಾನವ ಗಂಟೆಗಳೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟೆ (ಕಾರ್ಮಿಕ ಸಚಿವರ ಪರವಾಗಿ).—

ಅ) ೫೫

ಆ) ೫

ಇ) ಮುಷ್ಕರ ೩೭,೮೭,೫೨೦ ಒಟ್ಟು ೫೨,೭೦,೭೭೬ (೫೫ ಕಾರ್ಖಾನೆಗಳು ಮಾತ್ರ)
ಬೀಗಮುದ್ರೆ ೨೩,೮೩,೦೮೦ ಒಟ್ಟು ೮೯,೯೯,೮೨೪ (೫ ಕಾರ್ಖಾನೆಗಳು ಮಾತ್ರ)

ಮಧುಗಿರಿ ತಾಲ್ಲೂಕಿನ ಕೆಲವು ಗ್ರಾಮಗಳು ಸೇರ್ಪಡೆಯಾಗಿರುವುದು

೪೧೧. ಶ್ರೀ ಜಿ. ಎಸ್. ಶಿವನಂಜಪ್ಪ.–ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಧುಗಿರಿ ತಾಲ್ಲೂಕಿನ, ಕೋಟಗಾರಲಹಳ್ಳಿ ರೆವಿನ್ಯೂ ಗ್ರಾಮಕ್ಕೆ ಹೊನ್ನಾಪುರ, ಬುಳಸಂದ್ರ, ಭೀಮನಕಾಂಟೆ, ವಿರೂಪಗೊಂಡನಹಳ್ಳಿ, ಬಡಗಿಗೊಂಡನಹಳ್ಳಿ, ಗ್ರಾಮಗಳು ಸೇರ್ಪಡೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಜನವಿಗಳು ಬಂದಿದ್ದರೂ ಸಹ ಬೇರೆ ಬೇರೆ ರೆವಿನ್ಯೂ ಗ್ರಾಮಗಳಾಗಿ ಪರಿವರ್ತಿಸಿಲ್ಲದಿರುವುದು ಹಾಗೂ ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಬೇರೆ ಬೇರೆ ರೆವಿನ್ಯೂ ಗ್ರಾಮಗಳನ್ನಾಗಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು

ಆ) ಅಂತಹ ಯಾವ ಮನವಿಗಳು ಸರ್ಕಾರಕ್ಕೆ ಬಂದಿಲ್ಲ

ಇ) ಉದ್ಭವಿಸುವುದಿಲ್ಲ

೧೫ ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನ ಕರಿಸಂವ ಬಗ್ಗೆ

೯೫೫. ಶ್ರೀ ವಿ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಧಾನ ಮಂತ್ರಿಯವರ ೧೫ ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನ ಕರಿಸಲು ಸರ್ಕಾರವು ಒಪ್ಪಿಕೊಂಡಿದೆಯೇ ?

ಆ) ಹಾಗಿದ್ದರೆ, ಅನುಷ್ಠಾನ ಕರಿಸಲು ಕೈಗೊಂಡ ಕ್ರಮವೇನು ?

ಇ) ೧೫ ಅಂಶಗಳ ಕಾರ್ಯಕ್ರಮದಲ್ಲಿ ಒಂದಾದ ಅಂದರೆ ಯು.ಜಿ.ಸಿ.ರವರ ಸಹಾಯದಲ್ಲಿ ಅಲ್ಪ ಸಂಖ್ಯಾತರುಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಪರ್ಧಿಸಲು ತರಬೇತಿ ಹೊಂದುವುದನ್ನು ಸರ್ಕಾರವು ಅನುಷ್ಠಾನಕರಿಸುತ್ತಿದೆಯೇ ? ಇಲ್ಲದಿದ್ದಲ್ಲಿ, ಸರ್ಕಾರವು ಇದನ್ನು ಪರಿಗಣಿಸುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು)—

ಅ) ಹೌದು

ಆ) ಅನುಬಂಧದಲ್ಲಿ ನಮೂದಿಸಿದೆ

ಇ) ಹೌದು.ಕೇಂದ್ರ ಧನ ಸಹಾಯ ಆಯೋಗದ ಯೋಜನೆ ಮೇರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಲ್ಪಸಂಖ್ಯಾತ ವರ್ಗದವರೂ ಸೇರಿದಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಐ.ಏ.ಎಸ್. ಮತ್ತು ಐ.ಪಿ.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ೧೯೮೬ನೇ ಇಸವಿಯಿಂದ ತರಬೇತಿ ನೀಡಲಾಗುತ್ತಿದೆ. ಈ ಬಗ್ಗೆ ಕೇಂದ್ರ ಧನ ಸಹಾಯ ಆಯೋಗದಿಂದ ರೂ.೧.೨೫ ಲಕ್ಷವನ್ನು ೧೯೮೬ರಲ್ಲಿ ಒದಗಿಸಲಾಗಿತ್ತು. ಇತರೆ ವಿಶ್ವವಿದ್ಯಾನಿಲಯಗಳಲ್ಲೂ ಅಲ್ಪಸಂಖ್ಯಾತರೂ ಸೇರಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರಾಜ್ಯ ನಿಧಿಯಿಂದ ತರಭೇತಿ ನೀಡಲಾಗುತ್ತಿದೆ.